ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ ಎಸ್ ಪಿ ವಕೀಲರಿಂದಃ

ನಾನು ಪಿಯುಸಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಜೈನ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಕ್ಯಾಂಟೀನ್ ಇಟ್ಟುಕೊಂಡಿರುತ್ತೇನೆ. ನನಗೆ ಸುಮಾರು 15000 ಮಾಸಿಕ ಸಂಬಳ ಇರುತ್ತದೆ. ನಾನು 3-4 ವರ್ಷದಿಂದ ಸದರಿ ಕೆಲಸವನ್ನು ಮಾಡುತ್ತಿರುತ್ತೇನೆ. ನನ್ನ ಸಂಬಳ ಹೊರತು ಪಡಿಸಿ ನಾನು ರೇಷ್ಮೆ ಬೆಳೆ ಬೆಳೆಯುತ್ತೇನೆ. ನನ್ನನ್ನು ಅವಲಂಬಿಸಿ ಮನೆಯಲ್ಲಿ ತಾಯಿ ಇರುತ್ತಾರೆ. ನಾನು ಪ್ರತಿ ತಿಂಗಳು ನನ್ನ ಸಂಬಳದಿಂದ 7-8 ಸಾವಿರ ರೂಗಳನ್ನು ಉಳಿತಾಯ ಮಾಡುತ್ತೇನೆ.

ನಾನು 2016 ರಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದೆ. ಪ್ರತಿವಾದಿ ಸೋಮಯ್ಯನವರು ನನ್ನ ಭಾವನವರಾದ ಕೃಷ್ಣಪ್ಪ ರವರ ಕಡೆಯಿಂದ ಸುಮಾರು 8-9 ವರ್ಷಗಳಿಂದ ಪರಿಚಯ ಇರುತ್ತದೆ. ಪ್ರತಿವಾದಿರವರೇ ನನ್ನ ಬಳಿ ಬಂದು ಅವರ ಜಮೀನು ಮಾರಾಟಕ್ಕೆ ಇದೇ ಎಂದು ತಿಳಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು ಹಳೆಯ ಪತ್ರ ವನ್ನು ನಾನು ನೋಡಿರುತ್ತೇನೆ. ಆ ಸಮಯದಲ್ಲಿ ಅವರ ಹೆಸರಿಗೆ ಖಾತೆ ಆಗಿರಲಿಲ್ಲ. ನನಗೆ ಜಮೀನು ವ್ಯವಹಾರಗಳು ಮತ್ತು ಪತ್ರ ವ್ಯವಹಾರಗಳ ಬಗ್ಗೆ ಸ್ವಲ್ಪ ಜ್ಞಾನ ಇರುತ್ತದೆ. ನಾನು ಪ್ರತಿವಾದಿಯನ್ನು ಕ್ರಯದ ಕರಾರು ಪತ್ರ ಮಾಡಿಕೊಡುವಂತೆ ಅವರನ್ನು ಭೇಟಿ ಮಾಡಿದ ಸಮಯದಲ್ಲಿ ರಾಜಶೇಖರ್ ಮತ್ತು ಕೃಷ್ಣಪ್ಪನವರು ಇದ್ದರು.

ಕ್ರಯದ ಬಗ್ಗೆ ಮಾತುಕತೆಯನ್ನು ನಾವು ಕೃಷ್ಣಪ್ಪನವರ ಮನೆಯಲ್ಲಿ ಮಾಡಿರುತ್ತೇವೆ.

ನಮ್ಮ ಊರಿಗೂ ಮತ್ತು ಪ್ರತಿವಾದಿಯವರ ಊರಿಗೂ 20 ಕಿ.ಮೀ. ದೂರ ಇರುತ್ತದೆ.

ನಿಪಿ-1 ಕ್ರಯದ ಕರಾರು ಪತ್ರದ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ಸದರಿ ನಿಪಿ-1 ರಲ್ಲಿ 18 ತಿಂಗಳ ಕಲಾವಕಾಶವನ್ನು ಪ್ರತಿವಾದಿಯವರೇ ಎಲ್ಲಾ ದಾಖಲಾತಿಗಳನ್ನು ಒದಗಿಸಿ ಕ್ರಯಪತ್ರ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ.

ದಾವಾ ಆಸ್ತಿಯನ್ನು ಕರಾರು ಪತ್ರ ಆಗುವ ಪೂರ್ವದಲ್ಲಿ 2 ಬಾರಿ ಹಾಗೂ ನಂತರ 1 ಬಾರಿ ನಾನು ಹೋಗಿ ನೋಡಿರುತ್ತೇನೆ.

2016 ರಲ್ಲಿ ನನಗೆ ವ್ಯವಸಾಯದಿಂದ ಮಾಸಿಕ ರೂ. 15000 ಆದಾಯ ಇತ್ತು. ಎಲ್ಲ ಖರ್ಚುವೆಚ್ಚ ಕಳೆದು ಸುಮಾರು 10000 ರೂಗಳು ನನಗೆ ಉಳಿಯುತ್ತಿತ್ತು. ನನಗೆ ರೇಷ್ಮೆ ಬೆಳೆಯನ್ನು ಮಾರುಕಟ್ಟೆ ಹಾಕುತ್ತಿದ್ದ ಬಗ್ಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಸಾಧ್ಯವಿರುವುದಿಲ್ಲ. ನಾನು ಹೇಳುವಂತೆ ನನಗೆ ರೂ. 15000 ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. 2016 ರಲ್ಲಿ ನನಗೆ ಸೈಟ್ ಮಾರಾಟ ದಿಂದ 10 ಲಕ್ಷ ರೂಗಳು ಬಂದಿತ್ತು. ನನಗೆ ಸೈಟ್ ಮಾರಾಟದ ದಿನ ಮತ್ತು ತಿಂಗಳು ನೆನಪಿಲ್ಲ. ನಾನು ಕಲಾ ನೇತ್ರ ಎಂಬುವವರಿಗೆ ಸೈಟ್ ಅನ್ನು ಮಾರಾಟ ಮಾಡಿದ್ದೆ ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಲು ನನಗೆ ತೊಂದರೆ ಇರುವುದಿಲ್ಲ.

ನನಗೆ ರತ್ನಮ್ಮ ಎಂಬುವವರ ಪರಿಚಯ ಇರುವುದಿಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ, ಹಾಗೂ 5 ಲಕ್ಷ ರೂಗಳನ್ನು ರತ್ನಮ್ಮ ಎಂಬುವವರಿಗೆ ನೀಡಿದ್ದೆ ಎಂದರೆ ಸರಿಯಲ್ಲ. ರೂ. 5 ಲಕ್ಷ ಗಳನ್ನು ರತ್ನಮ್ಮ ನವರಿಗೆ ನಾನು ನೀಡಿದ್ದು ಅದರ ಆಧಾರಕ್ಕಾಗಿ ಅವರ ತಂಗಿಯ ಗಂಡನಾದ ಪ್ರತಿವಾದಿರವರ ಆಸ್ತಿಯನ್ನು ನೋಂದಣಿ ಮಾಡಿ ನನಗೆ ನೀಡಲಾಗಿತ್ತು ಎಂದರೆ ಸರಿಯಲ್ಲ.

ಕರಾರು ಪತ್ರ ಆದ ಸಮಾರು 17 ತಿಂಗಳ ನಂತರ ನಾನು ಪ್ರತಿವಾದಿಗಳಾದ ಸೋಮಯ್ಯನ ಬಳಿ ಹೋಗಿ ಕ್ರಯಪತ್ರ ಮಾಡಿಕೊಡುವಂತೆ ಕೇಳಿಕೊಂಡಿರುತ್ತೇನೆ. ಆ 17 ತಿಂಗಳ ಮಧ್ಯದಲ್ಲಿ ನಾನು ಪ್ರತಿವಾದಿ ರವರನ್ನು ಸಂಪರ್ಕಿಸಿರುವುದಿಲ್ಲ. ನಾನು 17 ತಿಂಗಳ ನಂತರ ಸೋಮಯ್ಯನವರನ್ನು ಕ್ರಯಪತ್ರ ಮಾಡಿಕೊಂಡುವಂತೆ ಕೇಳಿದ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಮತ್ತು ನನ್ನ ಪ್ರತಿವಾದ ಪತ್ರ ದಲ್ಲಿ ಬರೆಸಿದ್ದೇನೆ. ನಾನು ಸಾಕ್ಷಿ ಪ್ರಮಾಣ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ಮೇಲೆ ಹೇಳಿದಂತೆ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಸೈಟ್ ನಂ 34 ಮತ್ತು 35 ಇರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.